ಶ್ರೀ ಎ. ಭೀಮಪ್ಪನಾಯಕ್.—ಹಿಂದೆ ರೆಗ್ಯುಲರೈಸ್ ಆಗದೆ ಇರತಕ್ಕವರಿಗೆ ಕೂಡ ಪರ್ಮಿಟ್ ಕೊಡುತ್ತಿದ್ದರಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನನಗೆ ಆ ವಿಚಾರ ಗೊತ್ತಿಲ್ಲ. ಹಾಗೆ ಕೊಟ್ಟಿದ್ದರೆ ಅದು ತಪ್ಪು.

ಶ್ರೀ ಎ. ಭೀಮಪ್ಪನಾಯಕ್.—ತಾವು ಈ ರೀತಿ irregular ಆಗಿ ಕೆಲಸಮಾಡಿದ ಅಧಿಕಾರಿಗಳ ಮೇಲೆ ಮತ್ತು ಲೀಸಿನ ಫಾರಂ ಸಪ್ಲೈ ಮಾಡದೆ ತೊಂದರೆ ಪಡಿಸಿದವರ ಮೇಲೆ ಕಾರ್ಯಕ್ರಮ ತೆಗೆದು ಕೊಂಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾರಯಾರದು ಎಷ್ಟೆಷ್ಟು ಮಟ್ಟಿಗೆ ಜವಾಬ್ದಾರಿ ಇದೆ ಎನ್ನುವುದನ್ನು ನಿರ್ಧರಮಾಡಬೇಕಾದರೆ ಪ್ರತಿಯೊಂದು ಅಪ್ಲಿಕೇಷನ್ ತೆಗೆದುಕೊಂಡು ನಿರ್ಧರಮಾಡಬೇಕು. ಇದು ಅಷ್ಟು ಸುಲಭ ಸಾಧ್ಯವಲ್ಲವೆಂದು ಹೇಳಬೇಕು.

Sri J. MOHAMED IMAM.—In some cases Government have taken years to dispose of applications; what is the colossal delay due to ?

Sri H. M. CHANNABASAPPA.—There is a certain amount of delay. But it is due to the fact that various Departments will have to be consulted, particularly the Forest Department and the Revenue Department and sometimes the reports from these Departments are not received in time. Instructions have been issued to both the Departments to see that applications are expedited.

Sri J. MOHAMED IMAM.—Are the Government aware that nearly three to four years have been taken in good many cases and will it not cause a good deal of loss to persons ?

Sri H. M. CHANNABASAPPA.—Such delay is found to occur only in a few cases where there is overlapping of one area over the other and disputes arose. It is only in those cases there is delay.

Sri J. MOHAMED IMAM.—In 1954-55 and 1955-56 there is very small number of applications disposed of compared to previous years ?

Sri H. M. CHANNABASAPPA.—I have already said that there has been delay in some cases. Government will take all action to see that they are expedited.

Sri J. MOHAMED IMAM.—What were the reasons for the delay in stopping permits during this period ?

Sri H. M. CHANNABASAPPA.—I have already answered that point.

Sri J. MOHAMED IMAM.—Is it a fact that during this period some people were given licence to remove ore to the extent of 4,000 tons ?

Sri H. M. CHANNABASAPPA.—It is not correct. No permit has been issued to anybody who had no subsisting lease.

Sri J. MOHAMED IMAM.—Was it not a fact that during this period some persons were allowed to take large quantities of ore ?

Sri H. M. CHANNABASAPPA.—I am making it categorically clear that permits were not denied to anybody who was lawfully entitled to it. For such people who were not lawfully entitled to the permit, permits were not issued.

Sri J. MOHAMED IMAM.—Is it not a fact that the whole thing looks fishy and speaks of the inefficiency of the Government ?

Sri H. M. CHANNABASAPPA.—It is not correct. On the other hand, it speaks of the efficiency of the Government.

Holalugunda Tank in Kunigal Taluk.

Q.—429. **Sri N. HUCHMASTHY GOWDA** (Huliyurdurga).—

Will the Government be pleased to state :—

(*a*) the extent of atchkat under Holalugunda tank of Kunigal Taluk ;

(*b*) the number of acres of land that is being supplied with water at present through the eastern and western sluices of this tank ;

(*c*) whether it is a fact that the capacity of the western sluice has been increased when it was repaired ?

A.—**Sri H. M. CHANNABASAPPA** (Minister for Industries).—

(*a*) 261 acres.

(*b*) Eastern sluice (in the body wall of the waste weir) ... 41 acres
Western sluice ... 220 acres

(*c*) Yes.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ರಿಪೇರಿ ಮಾಡುವುದಕ್ಕೆ ಮೊದಲಿದ್ದ ತೂಬಿನಿಂದ ಸಾಕಾದಷ್ಟು ನೀರು ಒದಗುತ್ತಿರಲಿಲ್ಲವೇ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ನಮಗೆ ಬಂದಿರ ತಕ್ಕ ರಿಪೋರ್ಟ್ ಪ್ರಕಾರವಾಗಿ ನುಮಾರು 22 ಎಕರೆಗೆ ನೀರು ಸಾಕಾಗುತ್ತಿರಲಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನೂರಾರು ವರ್ಷ ಗಳಿಂದ ರೈತರ ತಕರಾರು ಯಾವುದೂ ಇಲ್ಲದೆ ಇಂಜಿನಿಯರಿಂಗ್ ಇಲಾಖೆಯವರು ಉದ್ದೇಶಪೂರ್ವಕವಾಗಿ ತೂಬನ್ನು ದೊಡ್ಡದು ಮಾಡಬೇಕೆಂದು ಹೇಳಿದ್ದಾರಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—22 ಎಕರೆಗಳ ಜಮೀನ್ದಾರರು ನೀರು ನರಬರಾಜು ಸಾಕಷ್ಟು ಆಗುತ್ತಿಲ್ಲವೆಂದು ಹೇಳಿದ್ದರ ಮೇರೆ ಪರಿಶೀಲನೆ ಮಾಡಿ 12 ಅಂಗುಲಗಳ ಕೊಳಾಯಿನಲ್ಲಿ ಸಾಕಷ್ಟು ನೀರು ಒದಗುವುದಿಲ್ಲವೆಂದು 16 ಅಂಗುಲಗಳ ಕೊಳಾಯಿಯನ್ನು ಹಾಕಿದರು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಬೇರೆ ತೂಬಿನಿಂದ ನೀರು ಪಡೆಯುವ ರೈತರು ತಮಗೆ ಇದರಿಂದ ತೊಂದರೆಯಾಗಿದೆ ಎಂದು ತಕರಾರು ಅರ್ಜಿ ಕೊಟ್ಟರಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರಿಗೂ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು ಸರ್ಕಾರದವರ ಜವಾಬ್ದಾರಿ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಬೇರೆ ಒಂದು high level channel ತೆಗೆದರೆ 250 ಎಕರೆಗಳ ಜಮೀನು ಅಚ್ಚುಕಟ್ಟಿಗೆ ಬರುತ್ತದೆ, ಇದನ್ನು ತಪ್ಪಿಸುವ ದುರುದ್ದೇಶದಿಂದ ಹೀಗೆ ಮಾಡಿದ್ದಾರೆಂದು ರೈತರು ತಮಗೆ ತಕರಾರು ಅರ್ಜಿಕೊಟ್ಟಿರಲಿಲ್ಲವೆ ?

Sri H. M. CHANNABASAPPA.—Certain petitions were received. Probably it is one of the items also.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—High level channelಗೆ ತೊಂದರೆಯಾಗದ ಹಾಗೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಪರಿಶೀಲನೆ ಮಾಡುತ್ತೇವೆ.

Electrical Department Increments to Operators..

Q.—580. **Sri Y. M. CHANDRASEKHARIAH** (Kadur).—

Will the Government be pleased to state :—

(*a*) the number of graduates, diploma holders, certificate holders and practical operators working in the Electrical Department of the State (information to be given categorywar) ;

(*b*) whether increments are being given to all Operators ;

(*c*) the number of Operators holding diploma and certificates who are given increments ;

(*d*) whether the gradation list of Operators of all categories is prepared ?

A.—**Sri H. M. CHANNABASAPPA** (Minister for Industries).—

(*a*) (1) Graduates ... 140
(2) Diploma Holders ... 415
(3) Certificate Holders ... 154
(4) Practical Operators ... 73

(*b*) No. Increment to some Operators could not be sanctioned pending sanction to the allocation statement of Operators.

(*c*) 332.

(*d*) Preparation of up-to-date Gradation List for Graduates and non-Graduates will be taken up after Allocation Statements of all categories are sanctioned.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಪದವೀಧರರ ನಂಬಳ ಎಷ್ಟರಿಂದ ಪ್ರಾರಂಭವಾಗುತ್ತದೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಯಾವ ಹುದ್ದೆಯಲ್ಲದ್ದಾರೆನ್ನುವುದರ ಮೇರೆ ಅವಲಂಬಿಸುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—(ಬಿ) ಭಾಗಕ್ಕೆ ಉತ್ತರವಾಗಿ ಆಪರೇಟರುಗಳ 'ಅಲೊಕೇಷನ್ ಸ್ಕೇಟ್‌ಮೆಂಟ್' ಮಂಜೂರಾಗದೆ ಇರುವುದರಿಂದ ಇಂಕ್ರಿಮೆಂಟ್ ಕೊಟ್ಟಿಲ್ಲವೆಂದು ಹೇಳಿದ್ದೀರಿ. ಇದು ಮಂಜೂರಾಗುವುದಕ್ಕೆ ಎಷ್ಟುಕಾಲ ಹಿಡಿಯುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—Assistant Superintendents, Junior Electrical Engineers ಇವರುಗಳ ಅಲೊಕೇಷನ್ ಮಂಜೂರಾಗಿದೆ. ಈಗ ಆಪರೇಟರುಗಳ ಅಲೊಕೇಷನ್ ಮಾತ್ರ ನಿಂತಿದೆ. ಅದು ಇವೊತ್ತು ನರ್ಕಾರದ ಮುಂದೆ ಇದೆ. ಅದನ್ನು ಶೀಘ್ರದಲ್ಲಿಯೇ ಮಂಜೂರ್ಮಾಡಲಾಗುವುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಹತ್ತು ಹನ್ನೆರಡು ವರ್ಷ ನರ್ವಿಸ್ ಆಗಿರುವವರನ್ನು ಬಿಟ್ಟು ನಾಲ್ಕು ಐದು ವರ್ಷ ನರ್ವಿಸ್ ಆಗಿರುವವರಿಗೆ ಇಂಕ್ರಿಮೆಂಟ್ ಕೊಟ್ಟಿರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲೊಕೇಷನ್ ಮಾಡುವಾಗ ಎಲ್ಲ ವಿಷಯಗಳನ್ನೂ ಗಮನಕ್ಕೆ ತೆಗೆದುಕೊಂಡು ಮಾಡಬೇಕಾಗುತ್ತದೆ, ಅದಕ್ಕೆ ಪಬ್ಲಿಕ್ ನರ್ವಿಸ್ ಕಮಿಷನರ ಅಂಗೀಕಾರ ಮೊರತ ಮೇರೆ ಜಾರಿಗೆ ಕೊಡಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ವಿಚಾರದಲ್ಲಿ ವಿದ್ಯುಚ್ಛಕ್ತಿ ಇಲಾಖೆಯ ಕೆಲವು ಅಧಿಕಾರಿಗಳಿಗೆ ಅನ್ಯಾಯಮಾಡಿ ಕೆಲವರನ್ನು ಮೇರೆ ಹಾಕಿ ಇಂಕ್ರಿಮೆಂಟ್ ಕೊಟ್ಟಿರುವುದು ನರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಮಾಡುವುದಕ್ಕಾಗುವುದಿಲ್ಲ. ಪಬ್ಲಿಕ್ ನರ್ವಿಸ್ ಕಮಿಷನರ ಸ್ಕ್ರುಟಿನಿಯಾಗುವುದರಿಂದ ಹಾಗಾಗಿದ್ದರೆ ನರಿಪಡಿಸಲಾಗುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಗ್ರೆಡೇಷನ್ ಲಿಸ್ಟ್ ತಯಾರಾಗುವುದಕ್ಕೆ ಎಷ್ಟು ವರ್ಷ ಬೇಕು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರೆಡಿಯಾಗಿದೆ, ಪಬ್ಲಿಕ್ ನರ್ವಿಸ್ ಕಮಿಷನ್ ಅಲೊಕೇಷನ್ ಮಂಜೂರಾತಿ ಕೊಟ್ಟ ಕೂಡಲೆ ಆಗುತ್ತದೆ.